## ರಾಷ್ಟ್ರಿಯ ವಿಜ್ಞಾನ ದಿನದ ವರದಿ

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 09.03.2023ರ ಗುರುವಾರ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು.

**ಮೊದಲ ಅವಧಿ:-**





ಕಾರ್ಯಕ್ರಮದ ಮೊದಲ ಅವಧಿಯು ಮಧ್ಯಾಹ್ನ 2ಕ್ಕೆ ಪ್ರಾರಂಭವಾಯಿತು. ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಚಿತಹ ಹಾಗೂ ಪ್ರಶಿಕ್ಷಣಾರ್ಥಿಗಳು ತಾವೇ ಸರಳವಾಗಿ ತಯಾರಿಸಿ ತೋರಿಸಬಹುದಾದ ವಿಜ್ಞಾನದ ಪ್ರಯೋಗಗಳ ಕುರಿತಾಗಿ ಯುವಾ ಬ್ರಿಗೇಡ್‌ನ ಮೊಬೈಲ್ ಲ್ಯಾಬ್ – **"ಸ್ಪಾರ್ಕ್ ಕಿಟ್"** ಕುರಿತಂತೆ **ಯುವಾ ಬ್ರಿಗೇಡ್ ಶ್ರೀ ಮಹಾಂತೇಶ ಮತ್ತು ತಂಡದವರು** ಪ್ರೌಡಶಾಲಾ ಪಠ್ಯ ಪುಸ್ತಕದಲ್ಲಿ ಬರುವ ಪ್ರಯೋಗಗಳನ್ನು ತರಗತಿಗಳಲ್ಲಿ ಹೇಗೆ ಬಳಸಿಕೊಳ್ಳಬೇಕೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಮುಂದಿನ ದಿನಗಳಲ್ಲಿ ತಾವೆಲ್ಲರೂ ವಿವಿಧ ಶಾಲೆಗಳಲ್ಲಿ ಶಿಕ್ಷಕರಾದ ಸಂದರ್ಭದಲ್ಲಿ ಈ ರೀತಿಯಲ್ಲಿ ಸರಳವಾಗಿ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರಯೋಗಗಳ ಪರಿಕಲ್ಪನೆಯನ್ನು ಕಟ್ಟಿಕೊಡಬಹುದಾಗಿದೆ ಎಂದು ತಿಳಿಸಿದರು.

ವಿಜ್ಞಾನ ಸಂಘದ ಸಂಚಾಲಕರು ಹಾಗೂ **ಸಹಾಯಕ ಪ್ರಾಧ್ಯಾಪಕರು ಆದ ಡಾ. ಸಿ.ಬಿ ವಿಕ್ರಮ್** ರವರು ಮಾತನಾಡುತ್ತಾ, ಜ್ಞಾನವು ಮರವಾದರೆ ವಿಜ್ಞಾನವು ಅದರ ಕೊಂಬೆ, ಮನುಷ್ಯ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆದಿದ್ದರೂ ಪರಿಸರ ಸೃಷ್ಟಿಸುವ ಸವಾಲುಗಳ ಮುಂದೆ ಅಸಹಾಯಕನಾಗುತ್ತಾನೆ ಎಂದು ವಿವರಿಸುತ್ತಾ ಪ್ರಶಿಕ್ಷಣಾರ್ಥಿಗಳಾದ ತಮಗೆ ನಾಲ್ಕನೇ ಸೆಮಿಸ್ಟರ್‌ನಲ್ಲಿ ಪ್ರಾಯೋಗಿಕ ಪಾಠ ಬೋಧನೆಚು ಸಂದರ್ಭದಲ್ಲಿ ವಿಜ್ಞಾನ ವಿಷಯ ಬೋಧಿಸುವ ಸಂದರ್ಭದಲ್ಲಿ ಈ ಪ್ರಯೋಗಗಳನ್ನು ತಾವೇ ತಯಾರಿಸಿಕೊಂಡು ಬಂದು ಸರಳವಾಗಿ ವಿದ್ಯಾರ್ಥಿಗಳಿಗೆ ಅರ್ಥೈಸುವ ಕೆಲಸವಾಗಬೇಕೆಂದು ತಿಳಿಸಿದರು.

ಪ್ರಶಿಕ್ಷಣಾರ್ಥಿ ಕುಮಾರಿ ಕೃಪಾನಿಧಿರವರು ಯುವ ಬ್ರಿಗೇಡ್ ತಂಡದವರನ್ನು ಸ್ವಾಗತಿಸಿ ಪರಿಚಯಿಸಿಕೊಟ್ಟರು. ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

**ಎರಡನೇ ಅವಧಿ:**

ವೇದಿಕೆ ಕಾರ್ಯಕ್ರಮವು ಮಧ್ಯಾಹ್ನ 3ಕ್ಕೆ ಪ್ರಾರಂಭವಾಯಿತು. ಡಿ.ಆರ್.ಡಿ.ಓ ದ ನಿವೃತ್ತ ವಿಜ್ಞಾನಿಗಳಾದ ಡಾ. ಅಣ್ಣಯ್ಯ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.










ವಿಜ್ಞಾನ ಸಂಘದ ಸಂಚಾಲಕರು ಹಾಗೂ **ಸಹಾಯಕ ಪ್ರಾಧ್ಯಾಪಕರು ಆದ ಡಾ. ಸಿ.ಬಿ ವಿಕ್ರಮ್** ರವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಪ್ರತೀ ವರ್ಷ ಪ್ರಶಿಕ್ಷಣಾರ್ಥಿಗಳಿಗೆ ವಿಜ್ಞಾನದ ಕುರಿತಾಗಿ ವೈಜ್ಞಾನಿಕ ಚಿಂತನೆಗೆ ಅನುಕೂಲವಾಗಲೆಂದು ಹಾಗೂ ಪ್ರಶಿಕ್ಷಣಾರ್ಥಿಗಳಾದ ತಾವುಗಳು ಸಮಾಜದಲ್ಲಿ ನಿತ್ಯ ನಡೆಯುವ ಕೆಲವೊಂದು ವಿಚಾರಗಳನ್ನು ಪ್ರಶ್ನಿಸುವ ವೈಜ್ಞಾನಿಕ ಮನೋಭಾವ ಬೆಳಸಿಕೊಳ್ಳಬೇಕು ಎಂಬುದರ ಜೊತೆಯಲ್ಲಿ ವಿಜ್ಞಾನ ದಿನದ ಪ್ರಮುಖ ಅಂಶಗಳು, ಹಾಗೂ ವಿಜ್ಞಾನದಲ್ಲಿ ಇನ್ನು ಹೆಚ್ಚು ಅವಿಷ್ಕಾರಗಳಾಗಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಡಿ.ಆರ್.ಡಿ.ಓ ದ ನಿವೃತ್ತ ವಿಜ್ಞಾನಿಗಳಾದ ಡಾ. ಅಣ್ಣಯ್ಯ ರವರು ತಮ್ಮ ವೃತ್ತಿ ಜೀವನದಲ್ಲಿ ನಡೆದ ಹಲವು ಅನುಭವಗಳನ್ನು ಹಂಚಿಕೊಳ್ಳುತ್ತಾ ಗಣಿಗಾರಿಕೆಯಲ್ಲಿ ವಿಜ್ಞಾನಿಗಳ ಪಾತ್ರ, ಸೇನೆಯಲ್ಲಿ ವಿಜ್ಞಾನಿಗಳ ಸಾಧನೆ ಹಾಗೂ ಹೊಸ ಆವಿಷ್ಕಾರಗಳ ಕುರಿತಾಗಿ ವಿವರವಾಗಿ ತಿಳಿಸಿದರು. ತಾವು ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಭಾರತದ ಮಾಜಿ ರಾಷ್ಟ್ರಪತಿಗಳಾದ ಎ.ಪಿ.ಜೆ ಅಬ್ದುಲ್ ಕಲಾಂ ರವರ ಜೊತೆಯಲ್ಲಿ ಸೇವೆ ಸಲ್ಲಿಸಿರುವ ನೆನಪುಗಳು ಹಾಗೂ ಅವರ ಸರಳತೆಯ ಜೀವನದ ಕ್ಷಣಗಳನ್ನು ಹಂಚಿಕೊಂಡರು.

ನಂತರದ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳಾದ ಕುಮಾರಿ ಅಕ್ಷತ ಸಿ.ಎಸ್ ರವರು ವಿಜ್ಞಾನ ಬೆಳೆದು ಬಂದ ಹಾದಿಯ ಕುರಿತಾಗಿ ಹಾಗೂ ಕುಮಾರಿ ವಿನುತ ಜಿ.ಎ ರವರು ಸಿ.ವಿ ರಾಮನ್ ರವರ ಕುರಿತಾಗಿ ಪತ್ರಿಕಾ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ ಆರ್, ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ಎಂ.ಕೆ ಹಾಗೂ ಡಾ. ಪ್ರಭುಸ್ವಾಮಿ ಎಂ ರವರು ವಿಜ್ಞಾನದ ಜ್ಞಾನವನ್ನು ಮನುಕುಲದ ಏಳಿಗೆಗಾಗಿ ಬಳಸೇಕೆ ಹೊರತು ಅವನ ಅವನತಿಗಾಗಿ ಬಳಸಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ ಕಾರ್ಯಕ್ರಮದ ಕುರಿತಾಗಿ ಮೆಚ್ಚುಗೆಯ ನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಸ್ಪಾರ್ಕ್ ಕಿಟ್ ಕುರಿತಾಗಿ ತಿಳಿಸುತ್ತಾ ಮುಂದಿನ ದಿನಗಳಲ್ಲಿ ಅದೇ ರೀತಿಯಲ್ಲಿ ತಾವೂ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಪ್ರಯೋಗಗಳನ್ನು ತೋರಿಸುವ ಮೂಲಕ ವಿಜ್ಞಾನವನ್ನು ಸುಲಭವಾಗಿ ಅರ್ಥೈಸಲು ತಿಳಿಸಿದರು.

ಕಾರ್ಯಕ್ರಮವನ್ನು ಪ್ರಶಿಕ್ಷಣಾರ್ಥಿಗಳಾದ ಕುಮಾರಿ ಶಮಂತ ಸಿ.ಎಸ್ ಹಾಗೂ ಕುಮಾರಿ ಪೂರ್ವಿಕ ಕೆ.ಆರ್ ರವರು ಸೊಗಸಾಗಿ ನಿರೂಪಿಸಿದರು. ಪ್ರಶಿಕ್ಷಣಾರ್ಥಿ ಕುಮಾರಿ ಚಂದನ ಎಲ್.ಎಂ ರವರು ಸ್ವಾಗತಿಸಿ ಅರ್ಪಿತ ಹೆಚ್.ಎಸ್ ನೆರೆದಿದ್ದ ಎಲ್ಲರನ್ನೂ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳು, ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು, ಬಿ.ಇಡಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

***** – *****

PRINCIPAL
J.S.S. Institute of Education
P.B. 26, SAKALESHPUR-573 134
Hassan Dist